ಹೇಳುತ್ತಿದ್ದೇನೆ. ನನಗೆ ನಿಜಕ್ಕೂ ನಿಮ್ಮ ಪರಿಚಯ ಇಲ್ಲ. ನಿಮ್ಮನ್ನ ಈ ಹಿಂದೆ ನೋಡಿಲ್ಲ, ಭೇಟಿ ಮಾಡಿಲ್ಲ, ಮತ್ತೆ ನೀವು ಸುಮ್ಮನೆ ನನ್ನ ಜೊತೆ ಮಾತಾಡಿ, ಸಮಯ ವ್ಯರ್ಥ ಮಾಡಿದ ಹಾಗೆ ಆಗಬಾರದು ನೋಡಿ. ಬಹುಶಃ ನೀವು ಮಾತಾಡಬೇಕೆಂದಿರುವ ವ್ಯಕ್ತಿ ಬೇರೆ ಯಾರೋ ಇರಬೇಕು, ನೀವು ತಪ್ಪಾದ ವ್ಯಕ್ತಿಯ ಜೊತೆ ಮಾತಾಡುತ್ತಿದ್ದೀರಿ'.

'ಸರ್, ತಪ್ಪಾದ ವ್ಯಕ್ತಿ ಅಂತ ಇಂಗ್ಲಿಷಿನಿಂದ ನೇರ ಟ್ರಾನ್ಸಲೇಟ್ ಮಾಡಬಾರದು. ಅದು ಮತ್ತೆ ಕನ್ನಡದಲ್ಲಿ ಧ್ವನಿಸುವಾಗ, ತಪ್ಪಾದ ಅರ್ಥ ಕೊಡುತ್ತದೆ' ಆಕೆ ಕೀಟಲೆಯ ನಗುನಗುತ್ತ ಕಣ್ಣಿನಿಂದ ನನ್ನ ಕಂಗಳನು ಸೆರೆಹಿಡಿದು ನಕ್ಕಳು. 'ಯಾರೀಕೆ.....?' ನಾನು ತಲೆ ಕೊಡವಿ ಶೋಧಿಸಿನೋಡಿ ಸೋತೆ.

'ಮೇಡಂ, ನೋಡಿ ನಿಜವಾಗಿಯೂ ನನಗೆ ನೀವ್ಯಾರೆಂದು ಗೊತ್ತಿಲ್ಲ, ಈ ಇಂದುಮತಿಯೆಂಬ ಹೆಸರಿನಾಚೆ, ಬೇರೆ ಏನಿದೆ ನಿಮ್ಮ ಪರಿಚಯ ಹೇಳಿ ನೋಡುವ' ನಾನು ಹೇಗಾದರೂ ಅವಳನ್ನ ಸಾಗಹಾಕಬೇಕೆಂಬ ಪ್ರಾಮಾಣಿಕ ಕಾಳಜಿಯಿಂದ ಕೇಳಿದೆ.

ಅವಳು ಮತ್ತದೇ ಕೀಟಲೆಯ ನಗು ತುಳುಕಿಸುತ್ತ, 'ಏನ್ಸಾರ್ ಗೊತ್ತಿಲ್ಲಾಂತಿದೀರಿ! ಹಾಗಿದ್ರೆ ನನ್ನ ಬಗ್ಗೆ ಅದು ಹೇಗೆ ಕಥೆ ಬರೆದ್ರಿ?' ಅವಳ ದನಿಯಲ್ಲಿ ಆಕ್ಷೇಪ ತುಂಬಿತ್ತು. ನಾನು ನಿಜಕ್ಕೂ ಸಿಟ್ಟಾಗಿದ್ದೆ. 'ಮೇಡಂ! ಇದೇ ಮೊದ್ಲು ನಿಮ್ಮನ್ನ ನೋಡ್ತಿರೋದು ನಾನು, ಹಿಂದೆ ಮುಂದೆ ಗೊತ್ತಿಲ್ಲ ನಿಮ್ದು, ಅಷ್ಟಕ್ಕೂ ನಾನ್ಯಾಕೆ ಎಲ್ಲ ಬಿಟ್ಟು ನಿಮ್ಮ ಕಥೆ ಬರೀಲಿ? ಮೊದ್ಲಿಗೆ ನಂಗೆ ನೀವ್ಯಾರಂತಲೇ ಗೊತ್ತಿಲ್ಲ, ಎಲ್ಲೋ ಏನೋ ಮಿಸ್ ಅಂಡರ್‌ಸ್ಟಾಂಡಿಂಗ್ ಆಗಿರಬೇಕು ನಿಮಗೆ'

'ನೋ ವೇ.. ನನ್ನ ಕಥೆಯನ್ನೇ ಬರೆದಿದ್ದೀರ ನೀವು. ತೀರ ನಂದೇ ಹೆಸ್ರು ಕೂಡ ಬಳಸಿದ್ದೀರ. ನಮ್ಮ ಬಗ್ಗೆಯೇ ಬರೆದಿದ್ದೀರ, ನಿಮಗೆ ನಮ್ಮ ಬಗ್ಗೆ ಯಾರು ಹೇಳಿದರು? ಇಷ್ಟೊಂದು ವಿಲಾವರಿಯಾಗಿ? ಆದರೆ ಈ ಕಥೆಯಲ್ಲೊಂದು ಕಡೆ ತಪ್ಪಾಗಿದೆ'

'ಕಥೆ ನಿಮ್ಮದು ಅಂತೇನಾದರೂ ನಿಮಗನ್ನಿಸುತ್ತಿದ್ದರೆ ಅದು ನಿಜಕ್ಕೂ ಕಾಕತಾಳೀಯ ಅಷ್ಟೆ. ಈಗ ನೀವೇ ಹೇಳಿದಿರಲ್ಲ, ಒಂದು ಕಡೆ ತಪ್ಪಾಗಿದೆ ಅಂತ, ಅದರಿಂದಲೇ ಸಾಬೀತಾಗುವುದಿಲ್ಲವೇ ಇದು ನಿಮ್ಮ ಕಥೆಯಲ್ಲವೆಂದು? ಹಾಗೊಂದು ವೇಳೆ ಅಚ್ಚ ಅಸಲು ನಿಮ್ಮ ಬಗ್ಗೆಯೇ ಬರೆದರೆ, ಈ ತಪ್ಪು ಕೂಡ ನುಸುಳಬಾರದಿತ್ತು ಅಲ್ಲವೇ?'

ನಾನೀಗ ಅವಳದೇ ಮಾತುಗಳಿಂದ ಅವಳನ್ನು ಕಟ್ಟಿಹಾಕಲು ನೋಡಿದೆ.

'ನಿಜ ಸರ್, ಆ ತಪ್ಪಿನ ಬಗ್ಗೆ ಹೇಳಲೆಂದೇ ನಾನೀಗ ನಿಮ್ಮನ್ನು ಭೇಟಿಯಾಗ ಬಂದದ್ದು.'

ಅವಳು ವಿಶಾಲವಾಗಿ ನಕ್ಕಳು. ಹಾಗೆ ನಗುವಾಗ ಅವಳ ಹಲ್ಲುಗಳು ಹೊಳೆದವು. ಪುಟ್ಟದಾದ, ಸುಂದರ ದಂತಪಂಕ್ತಿ, ಬೆಣಚುಕಲ್ಲಿನಲ್ಲಿ ಕಡೆದಿಟ್ಟಂತೆ ಇದ್ದವು.

ನಾನು ಸಣ್ಣವನಿರುವಾಗ ಒಂದು ಕಥೆ ಓದಿದ್ದೆ. ಬರೆದವರ ಹೆಸರು ನೆನಪಿಲ್ಲ. ಬಹುಶಃ ಸುಧಾ ಪತ್ರಿಕೆ, ಅದೂ ನೆನಪಿಲ್ಲ. ಕಥೆಗೆ ಬರೆದಿದ್ದ ಚಿತ್ರ ನೆನಪಿದೆ, ಸುಂದರ ಮುಖಭಾವವುಳ್ಳ ಹೆಣ್ಣೊಬ್ಬಳು, ಕೈ ಬೀಸುತ್ತ ನಿಂತ ಚಿತ್ರವದು. ಹಾಗೆ ನಿಂತ ಅವಳ ಸೆರಗು ಗಾಳಿಗೆ ಹಾರುತ್ತಿತ್ತು, ಮುಂಗುರುಳು ಸಹಾ.. ಇದೂ ನೆನಪಿದೆ. ಹಾಗೆಯೇ ಆ ಕಥೆಯ ಒಟ್ಟೂ ತಿರುಳು ನೆನಪಿದೆ, ಅವಳ ಹೆಸರಂತೂ ನೂರು ಶತಮಾನ ನೆನಪಿದೆ. ಅವಳ ಹೆಸರು ಆನಂದಿ. ಅದಲ್ಲದೆ ಆಕೆಯ ಬೆಣಚುಕಲ್ಲಿನಲ್ಲಿ ಕಡೆದಿಟ್ಟಂತ ಹಲ್ಲುಗಳು ಮತ್ತು ಆ ಸುರಸುಂದರ ನಗು ಸಹಾ ನೆನಪಿದೆ. ಆ ಸಣ್ಣ ವಯಸ್ಸಿನಲ್ಲಿ ನನ್ನೊಳಗೆ ಪಡಿಮೂಡಿದ ಆ ಚಿತ್ರ, ಅವಳ ಬಗ್ಗೆ ಮೂಡಿದ ಅನುತಾಪ, ಅವಳ ಬಗ್ಗೆ ಉಕ್ಕಿದ ಪ್ರೀತಿ, ಕಥೆ ಮೂಡಿಸಿದ ವಿಷಾದ ಎಲ್ಲವೂ ನೆನಪಿದೆ. ಅಂಥದ್ದೊಂದು ಕಥೆ ಬರೆದವರನ್ನು ನಾನು ಮರೆತಿದ್ದೇನೆ. ಆದರೆ, ಅದರ ಬಗ್ಗೆ ಬೇಸರವಿದೆ ನನಗೆ, ಆದರೆ ಈಗ ಈ ಇಂದುಮತಿಯೆಂಬ ಇವಳನ್ನು ನೋಡುವಾಗ, ಅವಳ ನಗುವನ್ನು ಕಂಡಾಗ ಈ ಮುಖವನ್ನು ಎಲ್ಲೋ ನೋಡಿದ್ದೇನೆ ಅನಿಸಿದ್ದಕ್ಕೂ, ನಾನು ಸಣ್ಣವನಿದ್ದಾಗ ಓದಿದ್ದ ಆನಂದಿಯ ಪಾತ್ರಕ್ಕೂ ಚೆಲುವಿನಲ್ಲಿ ಹೋಲಿಕೆ ಕಂಡಿತ್ತು, ಮಾತ್ರವಲ್ಲ ನಾನು ಬರೆದ ಕಥೆಯಲ್ಲಿ ಎಲ್ಲೋ ಒಂದೆಡೆ ನಾನು ಇಂದುಮತಿಯ ಬಗ್ಗೆ ಬರೆಯುತ್ತ,ನನ್ನೊಳಗೆ ನಿಂತಿದ್ದ ಆನಂದಿಯನ್ನು ಚಿತ್ರಿಸಿದ್ದೆ ಅಂತಲೂ ಅನಿಸತೊಡಗಿತ್ತು. ಅಷ್ಟೊಂದು ಪ್ರಬಲ ಚಿತ್ರವೇ ಅದು? ಆ ಪರಿ ಮನಸ್ಸಿನಲ್ಲಿ ಹೊಕ್ಕು ನಿಂತಿತ್ತೆ?.

ನಾನು ಅರೆಕ್ಷಣ ಬೆಕ್ಕಸಬೆರಗಾಗಿ ಅವಳನ್ನೇ